**1 ನೇ ಅಧಿಕ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ 1 ನೇ ನ್ಯಾಯಾಲಯ, ಗದಗ.**

C.C.No.1287/23

ಸಿಡಬ್ಲ್ಯೂ: 09 ಪಿಡಬ್ಲ್ಯೂ : 05

ದಿನಾಂಕ: 23-10-2024

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಸಾಕ್ಷಿದಾರರ ಹೆಸರು - ನೇತ್ರಾ
ತಂದೆಯ ಹೆಸರು - ನಾಗಪ್ಪ ಉಪ್ಪಾರ
ವಯಸ್ಸು - 39 ವರ್ಷ
ಉದ್ಯೋಗ - ಅಬಕಾರಿ ನಿರೀಕ್ಷಕರು
ವಾಸ ಸ್ಥಳ - ಗದಗ ವಲಯ

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದ:**

ನಾನು 2022 ಜೂನ್ ರಿಂದ ಇಲ್ಲಿಯವರೆಗೆ ಅಬಕಾರಿ ನಿರೀಕ್ಷಕರು ಅಂತಾ ಗದಗ ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ: 18-05-2023 ರಂದು ಅಬಕಾರಿ ನಿರೀಕ್ಷಕರು ಅಬಕಾರಿ ಉಪ ಆಯುಕ್ತರ ಕಚೇರಿ ಗದಗ ಜಿಲ್ಲೆ ಇವರಿಂದ ಸದರಿ ಪ್ರಕರಣದ ಕಡತವನ್ನು ಪಡೆದು ದಿ: 03-06-2023 ರಂದು ಸದರಿ ಪ್ರಕರಣದ ತನಿಖೆಯನ್ನು ರಸಾಯನಿಕ ಪರೀಕ್ಷೆ ಮಾದರಿಗಾಗಿ ಸ್ಯಾಂಪಲ್ ಗಳನ್ನು ಚಾಸಾ 6 ಇವರ ಮೂಲಕ ರಸಾಯನಿಕ ಪರೀಕ್ಷೆಗಾಗಿ ಧಾರವಾಡ ವಿಭಾಗ ಇವರಿಗೆ ಕಳುಹಿಸಿರುತ್ತೇನೆ. ನಂತರ ದಿ: 05-06-2023 ರಂದು ಈ ಬಗ್ಗೆ ಚಾಸಾ 6 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿ: 06-06-2023 ರಂದು ಆರ್ ಟಿ ಒ ಗದಗ ಇವರಿಗೆ ಸದರಿ ಪ್ರಕರಣದಲ್ಲಿ ಜಪ್ತಾದ ವಾಹನ ಬಿ ಎಕ್ಸಟ್ರಾಕ್ಟ ವರದಿಯನ್ನು ನೀಡುವಂತೆ ಕೋರಿ ಪತ್ರ ಬರೆದಿರುತ್ತೇನೆ. ಸದರಿಯವರು ದಿ: 20-06-2023 ರಂದು ತಮ್ಮಲ್ಲಿ ಸದರಿ ವಾಹನದ ಬಗ್ಗೆ ನಮ್ಮ ಕಚೇರಿಯಲ್ಲಿ ದಾಖಲಾತಿಗಳು ಇಲ್ಲಾ ಎಂದು ವರದಿ ನೀಡಿರುತ್ತಾರೆ. ಸದರಿ ದಿನದಂದು ರಸಾಯನಿಕ ವರದಿಯನ್ನು ಚಾಸಾ 7 ಇವರ ಮೂಲಕ ಸ್ವೀಕರಿಸಿರುತ್ತೇನೆ. ಅದೇ ದಿನ ಚಾಸಾ 7 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ನಂತರ ದಿ: 26-06-2023 ರಂದು ಶಿವಾನಂದ ಮೋಟಾರ್ಸ ಗದಗ ಇವರಿಗೆ ಸದರಿ ವಾಹನ ಮಾಲೀಕನ ಹೆಸರು ಮತ್ತು ವಿಳಾಸ ಒದಗಿಸುವಂತೆ ಪತ್ರ ಬರೆದಿರುತ್ತೇನೆ. ಸದರಿಯವರು ಅದೇ ದಿನ ತಮ್ಮ ಶೋರೂಂ ನಲ್ಲಿ ಸದರಿ ಮಾಹಿತಿ ಲಭ್ಯ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ದಿ: 27-06-2023 ರಂದು

ಶಾಂತೇಶ್ ಮೋಟಾರ್ಸ್ ಶೋರೂಂ , ಶಿವಾ ಅವಿನೂ ಗೋಕುಲ ರಸ್ತೆ ಹುಬ್ಬಳ್ಳಿ ಇವರಿಗೆ ವಾಹನ ಮಾಲೀಕನ ಹೆಸರು ಮತ್ತು ವಿಳಾಸ ಒದಗಿಸುವಂತೆ ಪತ್ರ ಬರೆದಿರುತ್ತೇನೆ. ಸದರಿಯವರು ದಿಃ 04-07-2023 ರಂದು ತಮ್ಮ ವರದಿಯಲ್ಲಿ ಸದರಿ ವಾಹನವನ್ನು ಪದ್ಮಾ ಬಿ ಬೆಳದಡಿ ಜವಳಿಗಲ್ಲಿ ಗಂಗಾಪೂರ ಪೇಟೆ ಗದಗ ಇವರಿಗೆ ದಿಃ 26-04-2011 ರಂದು ಮಾರಾಟ ಮಾಡಿರುವ ಬಗ್ಗೆ ವರದಿಯನ್ನು ನೀಡಿರುತ್ತಾರೆ . ಸದರಿ ದಿನದಂದು ದಾಳಿಯಲ್ಲಿ ಭಾಗವಹಿಸಿದ ಸಿಬ್ಬಂದಿಗಳಾದ ಚಾಸಾ 4, 5 ಇವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ದಿಃ 07-07-2023 ರಂದು ವಾಹನದ ಮಾಲೀಕರಾದ ಪದ್ಮಾ ಬಿ ಬೆಳದಡಿ ಇವರಿಗೆ ತನಿಖಾಧಿಕಾರಿಗಳ ಮುಂದೆ ಹಾಜರಾಗುವಂತೆ ನೋಟೀಸು ನೀಡಿರುತ್ತೆನೆ. ನಂತರ ಸದರಿಯವರು 1-ವಾರ ಕಳೆದು ನನ್ನ ಮುಂದೆ ಹಾಜರಾಗಲು ಬರಲಿಲ್ಲ, ಕಾರಣ 1 ಮತ್ತು 2 ನೇ ಆರೋಪಿತರ ವಿರುದ್ದ ಸಾಕಷ್ಟು ಅಪರಾಧ ಎಸಗಿದ ಬಗ್ಗೆ ಸಾಕ್ಷ್ಯಾಧಾರಗಳು ಕಂಡುಬಂದಿದ್ದರಿಂದ ದಿಃ 28-07-2023 ರಂದು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ. ಗೈರು ಹಾಜರು ಇರುವ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಆರೋಪಿ ಪರ ವಕೀಲರು ಗೈರು ಹಾಜರು ಇರುವ ಆರೋಪಿತರ ಗುರುತುವಿಕೆಗೆ ತಕರಾರು ಇರುವುದಿಲ್ಲಾ ಎಂದು ಹೇಳಿರುತ್ತಾರೆ.

ಪ್ರದೇಶಿಕ ಸಹಾಯಕ ರಾಸಾಯನಿಕ ಧಾರವಾಡ ಇವರಿಗೆ ಕಳುಹಿಸಿದ ಪತ್ರದಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ 10 ಎಂದು ಸಾಕ್ಷಿದಾರರ ಸಹಿಯನ್ನು ನಿಪಿಃ 10 ಎ ಎಂದು, ರಸಾಯನಿಕ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ 11 ಎಂದು ಸಾಕ್ಷಿದಾರರ ಸಹಿಯನ್ನು ನಿಪಿಃ 11 ಎ ಎಂದು, ಶಿವಾನಂದ ಮೋಟಾರ್ಸ್ ಹೋಂಡಾ ಶೋ ರೂಂ ಗದಗ ರವರಿಗೆ ಬರೆದ ಪತ್ರ ಮತ್ತು ಅದರ ಹಿಂಬರಹದ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ 12 ಎಂದು ಸಾಕ್ಷಿದಾರರ ಸಹಿಯನ್ನು ನಿಪಿಃ 12 ಎ ಎಂದು,ಶಾಂತೇಶ್ ಹೋಂಡಾ ಹುಬ್ಬಳ್ಳಿಯಲ್ಲಿ ಬರೆದ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ 13 ಎಂದು ಸಾಕ್ಷಿದಾರರ ಸಹಿಯನ್ನು ನಿಪಿಃ 13 ಎ ಎಂದು, ಶಾಂತೇಶ್ ಹೋಂಡಾ ರವರು ಮರಳಿ ಬರೆದ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ 14 ಎಂದು ಸಾಕ್ಷಿದಾರರ ಸಹಿಯನ್ನು ನಿಪಿಃ 14 ಎ ಎಂದು ಗುರುತಿಸಲಾಯಿತು. ಪ್ರದೇಶಿಕ ಸಾರಿಗೆ ಅಧಿಕಾರಿಗಳು ಗದಗ ಇವರಿಗೆ ಕಳುಹಿಸಿದ ಪತ್ರ ಮತ್ತು ಅವರು ನೀಡಿದ ಹಿಂಬರಹದ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ 15 ಎಂದು ಸಾಕ್ಷಿದಾರರ ಸಹಿಯನ್ನು ನಿಪಿಃ 15 ಎ ಎಂದು ಗುರುತಿಸಲಾಯಿತು. 2 ನೇ ಆರೋಪಿಗೆ ನೀಡಿದ ನೋಟಿಸಿನ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ 16 ಎಂದು ಸಾಕ್ಷಿದಾರರ ಸಹಿಯನ್ನು ನಿಪಿಃ 16 ಎ ಎಂದು ಗುರುತಿಸಲಾಯಿತು. ಮಾನ್ಯ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು 1 ನೋಡಿ ಗುರುತಿಸಿರುತ್ತಾರೆ.

***<u>ಪಾಟೀ ಸವಾಲು 1 ಮತ್ತು 2 ಆರೋಪಿ ಪರ ವಕೀಲರಾದ ಶ್ರೀ ಟಿ ಎನ್ ಬಿ ರವರಿಂದಃ</u>***

ನಾನು ತನಿಖೆಯನ್ನು ಪಡೆದ ನಂತರ ಘಟನಾ ಸ್ಥಳಕ್ಕೆ ಹೋಗಿ ಆಗಿರುವ ಘಟನೆಯ ಬಗ್ಗೆ ವಿಚಾರಣೆ ಮಾಡಿರುತ್ತೇನೆ. ಯಾರು ಯಾರಿಗೆ ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿದಾರಾರು ಅದು ಸಾರ್ವಜನಿಕ ಸ್ಥಳ ಇತ್ತು ಅಲ್ಲಿ ಹೋಗಿ ವಿಚಾರಣೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿಯವರನ್ನು ಸಾಕ್ಷಿದಾರರಾಗಿ ಮಾಡಿರುವುದಿಲ್ಲ ಎಂದರೆ ಸರಿ. ಘಟನಾ ಸ್ಥಳಕ್ಕೆ ಹೋಗಿ ವಿಚಾರಣೆ ಮಾಡಿರುವ ಕುರಿತು ದೋಷಾರೋಪಣ ಪಟ್ಟಿಯಲ್ಲಿ ನಮೂದು ಇರುವುದಿಲ್ಲ ಎಂದರೆ ಸಾಕ್ಷಿದಾರರು ಕೇಸ ಡೈರಿಯಲ್ಲಿ ನಮೂದು ಮಾಡಿರುತ್ತೆನೆ. ಸದರಿ ಡೈರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಡೈರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ . ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ , ವಿಚಾರಣೆ ಮಾಡಿರುವುದಿಲ್ಲ , ಆದ್ದರಿಂದ ಸದರಿ ಕುರಿತು ನಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಸಾರ್ವತ್ರಿಕ ಚುನಾವಣೆ ಇರುವಾಗ ನಗರದ ಹೊರ ವಲಯದಲ್ಲಿ ಚೆಕ್ ಪೋಸ್ಟ ಗಳು ಮಾಡಿರುತ್ತಾರೆ ಎಂದರೆ ಸರಿ. ನನ್ನ ತನಿಖಾ ಅವಧಿಯಲ್ಲಿ ಜಪ್ತಾದ ಮುದ್ದೆ ಮಾಲನ್ನು ಯಾರು, ಯಾವಾಗ, ಯಾವ ಅಂಗಡಿಯಿಂದ ಖರೀದಿ ಮಾಡಿರುತ್ತಾರೆ ಎಂದು ಕಂಡು ಬಂದಿರುತ್ತದೆಯಾ ಎಂದರೆ ಸಾಕ್ಷಿದಾರರು ಸದರಿ ಮುದ್ದೆ ಮಾಲು 1 ನೇ ಆರೋಪಿ ಯಿಂದ ಫಿರ್ಯಾದಿದಾರರು ಜಪ್ತ ಪಡಿಸಿ ಪ್ರಕರಣ ದಾಖಲಿಸಿರುವುದು ಕಂಡು ಬಂದಿರುತ್ತದೆ. ಸದರಿ ಫಿರ್ಯಾದಿದಾರರ ದೂರನ್ನು ಹಾಗೂ ಪಂಚನಾಮೆ ಪರಿಶೀಲಿಸಲಾಗಿ ಅದರಲ್ಲಿ ಜಪ್ತಾದ ಮುದ್ದೆ ಮಾಲಿನ ಭದ್ರತಾ ಚೀಟಿಗಳು ಪೂರ್ತಿಯಾಗಿ ಕಿತ್ತಿರುವುದು ನಮೂದಿಸಿದ್ದು ಹಾಗೂ ಜಪ್ತಾದ ಎಲ್ಲಾ ಮುದ್ದೆ ಮಾಲು ರಸಾಯನ ಪರೀಕ್ಷೆಗಾಗಿ ಯಥಾವತ್ತಾಗಿ ತೆಗೆದಿದ್ದರಿಂದ ಈ ಬಗ್ಗೆ ತನಿಖೆ ಮಾಡುವ ಪ್ರಮೇಯ ಉದ್ಭವಿಸಿರುವುದಿಲ್ಲ ಎಂದು ನುಡಿಯುತ್ತಾರೆ. ದಾಖಲೆಗಳ ಆಧಾರದ ಮೇಲೆ ದೋಷಾರೋಪಣ ಪಟ್ಟಿ ದಾಖಲಿಸಿರುತ್ತೀರಾ ಎಂದರೆ ಸಾಕ್ಷಿದಾರರು ದಾಖಲೆಗಳನ್ನು ಪರಿಶೀಲಿಸಿ, ತನಿಖೆ ಮಾಡಿ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಮುದ್ದೆ ಮಾಲುಗಳ ಮೇಲೆ ಸಂಖ್ಯೆ ಇಲ್ಲದೇ ಇರುವುದರಿಂದ ಯಾರು ಯಾವ ಅಂಗಡಿಯಿಂದ ಖರೀದಿ ಮಾಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ ಎಂದರೆ ರಿ. ಆರೋಪಿಗೂ, ಪ್ರಕರಣಕ್ಕೂ ಹಾಗೂ ಮು.ಮಾ.ಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಚುನಾವಣಾ ಸಂಹಿತೆ ಯಲ್ಲಿ ಹೆಚ್ಚಿಗೆ ಕೆಲಸ ಮಾಡಿರುತ್ತೇನೆಂದು ತೋರಿಸಲು ಎಲ್ಲಾ ದಾಖಲೆಗಳನ್ನು ಚಾಸಾ 1 ರವರು ಠಾಣೆಯಲ್ಲಿ ಸೃಷ್ಟಿಪಡಿಸಿ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 1 ರವರು ಆರೋಪಿಯಿಂದ ಮುದ್ದೆ ಮಾಲನ್ನು ಜಪ್ತ ಮಾಡಿ, ಯಾದಿ ತಯಾರಿಸಿ, ಆರೋಪಿಯ ಸಹಿ ಪಡೆದ ಕುರಿತು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಆರೋಪಿಯದ್ದು ಯಾವುದೇ ತಪ್ಪು ನನ್ನ ತನಿಖೆಯಲ್ಲಿ ಕಂಡು ಬರದೇ ಇದ್ದರೂ ಸಹ ನಾನು ಅವರ ವಿರುದ್ದ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇರುವುದಿಲ್ಲಾ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

ಜೆ.ಎಮ್.ಎಫ್.ಸಿ-1, ಗದಗ.